# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿ ಅಕ್ಕಿ, ದ್ವಿದಳ ಧಾನ್ಯ ಮತ್ತು ಒರಟು ಧಾನ್ಯ ಘಟಕ ಕಾರ್ಯಕ್ರಮದಡಿ 2018-19ನೇ ಸಾಲಿನಲ್ಲಿ ಉಳಿಕೆಯಾದ ಹಾಗು ಬಿಡುಗಡೆ ಮಾಡದೇ ಉಳಿದ ಅನುದಾನವನ್ನು ಮರುಮೌಲ್ಯೀಕರಿಸಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ:02.04.2019.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: CPS.2-13/2019-NFSM, ದಿ:30.04.2019.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 20-24/2017, NFSM(CA-V), ದಿನಾಂಕ:13-06-2019.
4. ಕೃಷಿ ಆಯುಕ್ತರ ಪತ್ರ ಸಂ: ಜಕೃನಿ(CSS)/NFSM/ಅಬಿ/ರಾ.ಸ.ಆದೇಶ/2019-20, ದಿ: 29.06.2019.

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ (NFSM) ಯೋಜನೆಯಡಿ ಲೆಕ್ಕ ಶೀರ್ಷಿಕೆ: 2401-00-102-0-08 ರಡಿ ಒಟ್ಟು ರೂ. 17477.00 ಲಕ್ಷ ಅನುದಾನ ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯನ್ನು 2019-20ನೇ ಸಾಲಿನಲ್ಲಿಯೂ ಮುಂದುವರೆಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಕೇಂದ್ರ ಸರ್ಕಾರದ ಪತ್ರದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಶೇ 60:40 ರ ಹಂಚಿಕೆ ವಿನ್ಯಾಸದಲ್ಲಿ 2019-20ನೇ ಸಾಲಿನಲ್ಲಿ ಒಟ್ಟಾರೆ ರೂ.20370.741 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (3)ರ ಕೇಂದ್ರ ಸರ್ಕಾರದ ಪತ್ರದಲ್ಲಿ ಎನ್.ಎಫ್.ಎಸ್.ಎಂ - ಅಕ್ಕಿ, ದ್ವಿದಳ ಧಾನ್ಯ, ಒರಟು ಧಾನ್ಯ ಮತ್ತು ನ್ಯೂಟ್ರಿ ಸೀರಿಯಲ್ಸ್ ಯೋಜನೆಗಳಡಿ 2018-19ನೇ ಸಾಲಿನಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಉಳಿಕೆಯಾಗಿರುವ ಅನುದಾನದ ಪೈಕಿ ಕೇಂದ್ರದ ಪಾಲಿನ ಅನುದಾನ ರೂ.4031.52 ಲಕ್ಷಗಳನ್ನು ಮರುಮೌಲ್ಯೀಕರಿಸಿ 2019-20ನೇ ಸಾಲಿನಲ್ಲಿ ಯೋಜನೆಯ ಆಯಾ ಕಾರ್ಯಕ್ರಮಗಳಡಿ ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನಾಗಿ ಬಳಕೆಮಾಡಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (4) ರ ಆಯುಕ್ತರು, ಕೃಷಿ ಇಲಾಖೆ ಇವರ ಪತ್ರದಲ್ಲಿ ಕೇಂದ್ರ ಸರ್ಕಾರವು ಎನ್.ಎಫ್.ಎಸ್.ಎಂ - ಅಕ್ಕಿ, ದ್ವಿದಳ ಧಾನ್ಯ, ಒರಟು ಧಾನ್ಯ ಮತ್ತು ನ್ಯೂಟ್ರಿ ಸೀರಿಯಲ್ಸ್ ಕಾರ್ಯಕ್ರಮಗಳಡಿ 2018-19ನೇ ಸಾಲಿನಲ್ಲಿ ಬಿಡುಗಡೆಯಾಗದೇ ಬಾಕಿ ಉಳಿದಿರುವ ಹಾಗೂ ಬಿಡುಗಡೆಯಾಗಿ ವೆಚ್ಚವಾಗದೇ ಉಳಿಕೆಯಾಗಿರುವ ಅನುದಾನ ರೂ.6719.204 ಲಕ್ಷಗಳನ್ನು (ಕೇಂದ್ರದ ಪಾಲಿನ ರೂ.4031.52 ಲಕ್ಷಗಳು ಮತ್ತು ರಾಜ್ಯದ ಪಾಲಿನ ರೂ.2687.694 ಲಕ್ಷಗಳು) ಮರುಮೌಲ್ಯೀಕರಿಸಿ ಪ್ರಸ್ತುತ ಸಾಲಿನಲ್ಲಿ ಲೆಕ್ಕ ಶಿರ್ಷಿಕೆ:2401-00-102-0-08 ರಡಿ ಒದಗಿಸಿರುವ ಅನುದಾನದಿಂದ ಬಿಡಗಡೆ ಮಾಡುವಂತೆ ಕೋರಲಾಗಿದೆ.

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 19 ಕೃಉಇ 2019, ಬೆಂಗಳೂರು, ದಿನಾಂಕ:05.08.2019**

2019-20ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: **2401-00-102-0-08** ಅಡಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ (NFSM) ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ 2018-19ನೇ ಸಾಲಿನಲ್ಲಿ **ಉಳಿಕೆಯಾಗಿ** ಹಾಗೂ ಬಿಡುಗಡೆಯಾಗದೇ ಉಳಿದಿರುವ ಮರುಮೌಲ್ಯೀಕೃತ ಅನುದಾನ ರೂ.6719.204 ಲಕ್ಷಗಳನ್ನು **(ಆರು ಸಾವಿರದ ಏಳುನೂರ ಹತ್ತೊಂಬತ್ತು ಲಕ್ಷದ ಇಪ್ಪತ್ತು ಸಾವಿರದ ನಾಲ್ಕುನೂರು ರೂಪಾಯಿಗಳು ಮಾತ್ರ)** ಕೇಂದ್ರ **ಹಾಗೂ ರಾಜ್ಯದ** ಪಾಲು ಶೇ 60:40 ಅನುಪಾತದಲ್ಲಿ ಈ **ಕೆಳಕಂಡಂತೆ** ಘಟಕವಾರು ಹಾಗೂ ವರ್ಗವಾರು ಬಿಡುಗಡೆ **ಮಾಡುತ್ತಾ** ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು **ಸರ್ಕಾರವು** ಮಂಜೂರಾತಿ ನೀಡಿದೆ.

(ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಯೋಜನೆ (NFSM) | ವರ್ಗವಾರು ವಿವರ | | | | | |
|---|---|---|---|---|---|---|---|
| | | | ಸಾಮಾನ್ಯ 106 | ವಿ.ಘ.ಯೋ 422 | ಗಿ.ಉ.ಯೋ 423 | ಇತರೆ 059 | ಒಟ್ಟು |
| 1 | ಅಕ್ಕಿ | ಕೇಂದ್ರ ಪಾಲು | 85.160 | 0.000 | 4.120 | 2.440 | **91.720** |
| | | ರಾಜ್ಯ ಪಾಲು | 56.760 | 0.000 | 2.750 | 1.630 | **61.140** |
| | | ಒಟ್ಟು | **141.920** | **0.000** | **6.870** | **4.070** | **152.860** |
| 2 | ದ್ವಿದಳ ಧಾನ್ಯ | ಕೇಂದ್ರ ಪಾಲು | 2674.240 | 227.790 | 113.980 | 7.330 | **3023.340** |
| | | ರಾಜ್ಯ ಪಾಲು | 1782.830 | 151.860 | 75.994 | 4.890 | **2015.574** |
| | | ಒಟ್ಟು | **4457.070** | **379.650** | **189.974** | **12.220** | **5038.914** |
| 3 | ಒರಟು ಧಾನ್ಯ | ಕೇಂದ್ರ ಪಾಲು | 237.070 | 27.040 | 14.110 | 0.000 | **278.220** |
| | | ರಾಜ್ಯ ಪಾಲು | 158.050 | 18.030 | 9.410 | 0.000 | **185.490** |
| | | ಒಟ್ಟು | **395.120** | **45.070** | **23.520** | **0.000** | **463.710** |
| 4. | ನ್ಯೂಟ್ರಿ ಸಿರಿಧಾನ್ಯ | ಕೇಂದ್ರ ಪಾಲು | 500.590 | 94.990 | 41.500 | 1.150 | **638.230** |
| | | ರಾಜ್ಯ ಪಾಲು | 333.720 | 63.330 | 27.670 | 0.770 | **425.490** |
| | | ಒಟ್ಟು | **834.310** | **158.320** | **69.170** | **1.920** | **1063.720** |
| ಮಹಾ ಒಟ್ಟು | | ಕೇಂದ್ರ ಪಾಲು | 3497.060 | 349.820 | 173.710 | 10.920 | **4031.510** |
| | | ರಾಜ್ಯ ಪಾಲು | 2331.360 | 233.220 | 115.824 | 7.290 | **2687.694** |
| | | ಒಟ್ಟು | **5828.420** | **583.040** | **289.534** | 18.210 | **6719.204** |

ಕೃಷಿ ನಿರ್ದೇಶಕರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ/01/ಟಿಎಫ್‌ಪಿ/2019 ದಿ:03-04-2019 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 17 ಆಂಆಸ 2019, ದಿನಾಂಕ:31-07-2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

B S Nagaratnam

(ಬಿ.ಎಸ್.ನಾಗರತ್ನಮ್ಮ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೃಷಿ ಇಲಾಖೆ (ಯೋಜನೆ)

5/8

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
13. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

*****